ಧರ್ಮ ಶಾಲೆಗಳನ್ನು ನಡೆಸುತ್ತಿಲ್ಲ, ಅದು ಧರ್ಮಶಾಲೆ ಆಗಬಾರದು ಎಂದು ಹೇಳಿ ನಮ್ಮ ಅಭಿ ಪ್ರಾಯ. ಯೂನಿಫಾರಂ ಕಾರ್ಪೋರೇಷನ್ ಬಿಲ್ ಸಭೆಯ ಮುಂದೆ ಬರುವುದು ಇದೆ ಆಗ ಮಾನ್ಯ ಸದಸ್ಯರು ಸಲಹೆ ಕೊಡಬಹುದು.

ಶ್ರೀ ಸಿದ್ದಯ್ಯ ಕಾಶೀಮಠ.—ಧರ್ಮಶಾಲೆಯ ಉದ್ದೇಶ ಸದುಪಯೋಗಪಡಿಸುವುದಕ್ಕೆ ಅಲ್ಲಿರತಕ್ಕ ಆಯುರ್ವೇದ ಡಿಸ್‌ಪೆನ್ಸರಿಯನ್ನು ತೆಗೆದು ಈ ಧರ್ಮಶಾಲೆಯನ್ನು ನಡೆಸುವುದಕ್ಕೆ ಆದೇಶ ಕೊಡಿಸುತ್ತೀರಾ ?

ಶ್ರೀ ಕೆ. ಪುಟ್ಟಸ್ವಾಮಿ.—ಅದಕ್ಕೆ ಅಧಿಕಾರ ಇಲ್ಲ, ಇಲ್ಲದೇ ಹೇಗೆ ಮಾಡಿ ಎಂದು ಹೇಳು ತ್ತೀರಿ ? ವಿಧೇಯಕ ಬಂದಾಗ ಸಲಹೆ ಮಾಡಿ.

ಶ್ರೀ ಎಸ್. ಎಸ್. ಶೆಟ್ಟರ್.—ಆಯುರ್ವೇದ ದವಾಖಾನೆಯನ್ನು ಅಲ್ಲಿ ಇಟ್ಟಿದ್ದೀರಿ. ಧರ್ಮ ಶಾಲೆಯನ್ನು ತೆಗೆಯಬಾರದು ಎಂದು ವಿರೋಧ ಮಾಡಿದರೂ ಕೂಡಬೇಕೂ ಅಂತ ಈ ಡಿಸ್‌ಪೆನ್ ಸರಿಯನ್ನು ಅಲ್ಲಿ ತೆಗೆದಿದ್ದರೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

Sri K. PUTTASWAMY.—The Hon'ble member knows how much powers the Government has got in this connection. I can only interfere with their activities in an emergent situation under sections of the Bombay Corporation Act. There is no such thing at all.

Mr. SPEAKER.—Question No. 369, the hon. member is absent. Next Question.

Rural Water Supply Scheme.

114. Sri N. G. HALAPPA (Channagiri).—

Will the Minister for Development be pleased to state:—

(*a*) whether it has come to the notice of Government that there is acute scarcity of drinking water in Goppenahalli village, Channagiri Taluk ;

(*b*) whether Government has taken steps to provide drinking water to the said village under Rural Water Supply Scheme, if not, whether there is any proposal before the Government, in this behalf ?

A.—Sri B. L. GOWDA (Deputy Minister for Development).—

(*a*) Yes.

(*b*) Yes. The scheme is being finalised by the Chief Engineer (Gl), Bangalore.

ಶ್ರೀ ಎನ್. ಜಿ. ಹಾಲಪ್ಪ.—ಗೊಪ್ಪನಹಳ್ಳಿಯ ಗ್ರಾಮದಲ್ಲಿ ಕುಡಿಯುವ ನೀರಿನ ತೀವ್ರ ಅಭಾವ ಇದೆ ಎಂದು ಹೇಳುತ್ತೀರಿ, ಅಲ್ಲಿ 3 ಸಾವಿರ ಪ್ರಜಾಸಂಖ್ಯೆ ಇದೆ, 4-5 ವರ್ಷಗಳಿಂದ ಈ ಒಂದು ತೀವ್ರ ಪರಿಸ್ಥಿತಿ ಇದೆ ಆದ್ದರಿಂದ ಅತಿ ಜಾಗ್ರತೆಯಾಗಿ ಇದಕ್ಕೆ ಸೂಕ್ತವಾದ ವ್ಯವಸ್ಥೆಯನ್ನು ಮಾಡುತ್ತೀರಾ ?

†ಶ್ರೀ ಬಿ. ಎಲ್. ಗೌಡ.—ಈಗಾಗಲೇ 97 ಸಾವಿರ ರೂಪಾಯಿನ ಒಂದು ಯೋಜನೆ ಮಂಜೂ ರಾಗಿದೆ, ಡೀಟೇಲ್ಡ್ ಎಸ್ಟಿಮೇಟ್ ಮಾಡಿ ಕೊಡಬೇಕೆಂದು ಕಳುಹಿಸಿದ್ದೇವೆ, ಬಂದ ತಕ್ಷಣ ಪರಿಶೀಲನೆ ಮಾಡುತ್ತೇವೆ.

ಶ್ರೀ ಎನ್. ಜಿ. ಹಾಲಪ್ಪ.—ಗ್ರಾಮದಿಂದ ನುಮಾರು ಎರಡು ಮೈಲಿ ದೂರ ಹೋಗಿ ನೀರನ್ನು ತರುತ್ತಾ ಇದ್ದಾರೆ, ರೊಟೇನ್ ಪರ್ಕ್‌ನಲ್ಲಿ ಮಾಡಬೇಕೆಂದರೆ 6 ತಿಂಗಳು ಆಗಬಹುದು ಆದ್ದರಿಂದ ಇದನ್ನು ಟಾಪ್‌ಪ್ರಯಾರಿಟಿ ಬೇಸಿಸ್ ಮೇಲೆ ಮಾಡಿಸುತ್ತೀರಾ ?

ಶ್ರೀ ಬಿ. ಎಲ್. ಗೌಡ.—ಜಾಗ್ರತೆ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಬಿ. ಪರಮೇಶ್ವರಪ್ಪ.— ಈ ಯೋಜನೆಗಳನ್ನು ಮಂಜೂರು ಮಾಡುವಾಗ 10 ಪರ್ಸೆಂಟ್ ಗ್ರಾಮಪಂಚಾಯ್ತಿಯವರು ಕಾಂಟ್ರಿಬ್ಯೂಷನ್ ಕೊಡಬೇಕೆಂದು ಮಾಡಿದ್ದೀರಿ. ಇದುವರೆಗೂ ಮಾಡಿರತಕ್ಕ ಯೋಜನೆಗಳಿಗೆ ಅಂತಹ ನಿರ್ಬಂಧವೇನೂ ಇರಲಿಲ್ಲ, ಹಿಂದಿನ ವ್ಯವಸ್ಥೆಯನ್ನೇ ಅನುಸರಿಸಿದರೆ ಗ್ರಾಮಪಂಚಾಯ್ತಿಗಳಿಗೆ ಅನುಕೂಲವಾಗುವುದಿಲ್ಲವೇ ?

ಶ್ರೀ ಬಿ. ಎಲ್. ಗೌಡ.—ಹಣದ ಕೊರತೆ ಇರುವುದರಿಂದ ಈ ಕಡ್ಡಾಯ ಮಾಡಿದ್ದೇವೆ.

ಶ್ರೀ ಕೆ. ಎಚ್. ಪುಟ್ಟರಂಗನಾಥ್.—10 ಪರ್ಸೆಂಟ್ ಕಂಟ್ರಿಬ್ಯೂಷನ್ ಕೊಟ್ಟಿರತಕ್ಕ ಗ್ರಾಮಗಳ ಪೈಕಿ ಎಷ್ಟು ಗ್ರಾಮಗಳಿಗೆ ಮಂಜೂರು ಮಾಡಿಲ್ಲ, ಎಷ್ಟು ಗ್ರಾಮಗಳಿಗೆ ದುಡ್ಡು ಕೊಟ್ಟಿಲ್ಲ ಎಂಬ ಅಂಕಿಅಂಶವನ್ನು ಒದಗಿಸುತ್ತೀರಾ ?

ಶ್ರೀ ಬಿ. ಎಲ್. ಗೌಡ.—ಅದನ್ನು ಹೇಳುವುದಕ್ಕಾಗುವುದಿಲ್ಲ.

ಶ್ರೀ ಎನ್. ಜಿ. ಹಾಲಪ್ಪ.—ಈ ಪ್ರಶ್ನೆಗೆ ಹಣದ ಅಭಾವ ಎಂದು ಹೇಳುತ್ತೀರಿ, ಅದನ್ನು ಬದಿಗೆ ಇಟ್ಟು ಈ ಕೆಲಸವನ್ನು ಜಾಗ್ರತೆ ಮಾಡಿಸಿಕೊಡುತ್ತೀರಾ ?

ಶ್ರೀ ಬಿ. ಎಲ್. ಗೌಡ.—ತಮಗೆರ್ಲಾ ದೇಶದ ಹಣಕಾಸಿನ ಪರಿಸ್ಥಿತಿ ಗೊತ್ತಿದೆ, ಹನ್ನೊಂದೂವರೆ ಲಕ್ಷ ರೂಪಾಯಿ ಮಾತ್ರ ಎನ್.ಆರ್.ಡಬ್ಲ್ಯೂ.ಗೆ ಒದಗಿಸಿದೆ.

Sri H. SIDDAVEERAPPA.—Will the Government assure that this scheme will be implemented in Gopponahalli village during the current financial year itself ?

Sri B. L. GOWDA.—We will consider that. I cannot give an assurance.

Sri H. SIDDAVEERAPPA.—Sir, the scheme and other things are ready. Why should you waste your paper by writting merely schemes ?

ಶ್ರೀ ಬಿ. ಎಲ್. ಗೌಡ.—ನಿಮ್ಮ ಸೇಕಡ 10 ಭಾಗವನ್ನು ಕೊಡುವುದಾದರೆ ಮಾಡಿಕೊಡುತ್ತೇವೆ.

ಶ್ರೀ ಬಿ. ನಂಜಪ್ಪ.—ಜಾಗ್ರತೆ ಕೆಲಸವಾಗುವುದಿಲ್ಲ, ಸರ್ವೆ ಮಾಡುತ್ತೀರಿ; ಸಿಬ್ಬಂದಿ ಜಾಸ್ತಿ. ಯಾರು ಕೇಳಿದರೂ ಅಂದಾಜು ಮಾಡುವುದು, ಮಂಜೂರು ಮಾಡುವುದಿಲ್ಲ. ಇದಕ್ಕೆ ಕಾರಣವೇನು ?

ಶ್ರೀ ಬಿ. ಎಲ್. ಗೌಡ.—ಹಣ ಸಾಕಾಷ್ಟಿಲ್ಲ. ಆದ್ದರಿಂದ ನಿಧಾನವಾಗುತ್ತಿದೆ, ಹಣ ದೊರೆತ ಕೂಡಲೆ ಮಂಜೂರು ಮಾಡುತ್ತೇವೆ. ಹಣವಿಲ್ಲದಿದ್ದರೂ ಜನರು ತಾವಾಗಿಯೇ ಮುಂದೆ ಬಂದು ಕೇಳುತ್ತಾರೆ. ಅವಕಾಶವಾದಾಗ ಕೊಡುತ್ತೇವೆ.

Rural Water Scheme

115. **Sri J. R. HALASWAMY** (Jagalur). —

Will the Minister for Development be pleased to state :—

(*a*) the number of Rural Water schemes that have been sanctioned in Jagalur Taluk ;

(*b*) of them the number completed ?